ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮೊಹಮ್ಮದ್ ನವಾಜ್

ಎನ್.ಎಮ್. ಪ್ರೇಮ್ಕುಮಾರ್ -ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರದ ಪ್ರತಿನಿಧಿಯಾಗಿ,

ಸಬ್ ಇನ್ಸ್ಪೆಕ್ಟರ್ ಆಫ್ ಪೊಲೀಸ್, ಶ್ರೀನಿವಾಸಪುರ*

ಕ್ರಿಮಿನಲ್ ಮೇಲ್ಮನವಿಸಂಖ್ಯೆ: 36/2019, ದಿನಾಂಕ 3 ನೇ ಫೆಬ್ರುವರಿ, 2020.

ತೀರ್ಪು

ನ್ಯಾಯಮೂರ್ತಿ ಶ್ರೀ ಮೊಹಮ್ಮದ್ ನವಾಜ್:

ಭಾರತ ದಂಡ ಸಂಹಿತೆಯ 363 ನೇ ಮತ್ತು 376 ( 2) (  i) ನೇ ಪ್ರಕರಣಗಳ ಹಾಗೂ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಅಧಿನಿಯಮ, 2012 ರ (ಇದರಲ್ಲಿ ಇನ್ನು ಮುಂದೆ ' ತ್ಸೆ ಅಧಿನಿಯಮ ' ಎಂದು ಸಂಕ್ಷಿಪ್ತವಾಗಿ ಉಲ್ಲೇಖಿಸಲಾಗಿದೆ) 6 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಗಳಿಗಾಗಿ, ಆರೋಪಿಯನ್ನು ಅಪರಾಧಿಯೆಂದು ನಿರ್ಣಯಿಸಿ ಮತ್ತು ಶಿಕ್ಷೆ ನೀಡಿ, II ನೇ ಎ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಕೋಲಾರ [ಪೋ ವಿಶೇಷ ನ್ಯಾಯಾಲಯ ಇವರ ಕಡತದಲ್ಲಿನ ಎಸ್.ಸಿ.ಸಂಖ್ಯೆ: 31/2017 ರಲ್ಲಿ ಹೊರಡಿಸಿದದಿನಾಂಕ: 10.12.2018 ರ ತೀರ್ಪಿನ ವಿರುದ್ಧ ಆರೋಪಿಯು ಈ ಅಪೀಲನ್ನು ಸಲ್ಲಿಸಿದ್ದಾನೆ.

2. ಆರೋಪಿ/ಅಪೀಲುದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ವೀರಣ್ಣ ಜಿ. ತಿಗಡಿ ಮತ್ತು ಎದುರುದಾರ/ರಾಜ್ಯದ ಪರ ಹಾಜರಾದ ಶ್ರೀ ಕೆ. ನಾಗೇಶ್ವರಪ್ಪ, ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ನ್ಯಾಯವಾದಿ (ಫೀಡರ್) ಇವರ ವಾದಗಳನ್ನು ನಾನು ಆಲಿಸಿದ್ದೇನೆ.

3. ಇದು ಪ್ರಾಸಿಕ್ಯೂಷನ್ ಮೊಕದ್ದಮೆಯಾಗಿದ್ದು, ಅದು ಈ ಮುಂದಿನಂತಿದೆ:

ದಿನಾಂಕ:02.12.2016 ರಂದು ಬೆಳಿಗ್ಗೆ ಸುಮಾರು 4.00 ಗಂಟೆಗೆ, ಶ್ರೀನಿವಾಸಪುರ ಪೊಲೀಸ್ ಠಾಣೆಯ ಕಾರವ್ಯಾಪ್ತಿಯೊಳಗಿನ ನೀಲತ್ತೂರು ಗ್ರಾಮದಲ್ಲಿ, ಆರೋಪಿಯು ಸುಮಾರು 17 ವರ್ಷ ವಯಸ್ಸಿನ ಸಂತ್ರಸ್ತ ಬಾಲಕಿ (ಪಿ.ಡಬ್ಲ್ಯು .2) ಯನ್ನು, ಆಕೆಯ ಮನೆಯಿಂದ, ಆಕೆಯನ್ನು ಮದುವೆಯಾಗುವ ಉದ್ದೇಶದಿಂದ ಮನವೊಲಿಸಿ, ಅಪಹರಿಸಿದ್ದನು ಮತ್ತು ಆಕೆಯನ್ನು ಶ್ರೀನಿವಾಸಪುರಕ್ಕೆ ನಂತರ ಮದನಪಲ್ಲಿಗೆ ಮತ್ತು ಅಲ್ಲಿಂದ ಆಂಧ್ರಪ್ರದೇಶದ ತಂಬಲಪಲ್ಲಿಯ ಅಂಗಲ್ಲು ಗ್ರಾಮದಲ್ಲಿರುವ ಸಿ.ಡಬ್ಲ್ಯು.II-ನಾಗರಾಜ್ ಎಂಬಾತನ ಮನೆಗೆ ಕರೆದುಕೊಂಡು ಹೋಗಿ, ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾನೆ ಮತ್ತು ಆ ಮೂಲಕ ಭಾರತ ದಂಡ ಸಂಹಿತೆಯ 363 ನೇ ಮತ್ತು 376 ( 2) (  i) ನೇ ಪ್ರಕರಣಗಳ ಹಾಗೂ ಪೋ ಅಧಿನಿಯಮದ 6 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಗಳನ್ನು ಎಸಗಿರುವನು.

ಮೇಲೆ ಹೇಳಿದ ಅಪರಾಧಗಳಿಗಾಗಿ ಆರೋಪಿಯ ವಿರುದ್ಧ ಆರೋಪಗಳನ್ನು ರೂಪಿಸಲಾಗಿದ್ದು, ಆ ಸಂಬಂಧದಲ್ಲಿ ಆರೋಪಿಯು ತಪ್ಪನ್ನು ಒಪ್ಪಿಕೊಂಡಿಲ್ಲ ಮತ್ತು ವಿಚಾರಣೆ ನಡೆಸಬೇಕೆಂದು ಕ್ಲೇಮು ಮಾಡಿರುತ್ತಾನೆ.

ತಮ್ಮ ಮೊಕದ್ದಮೆಯನ್ನು ಸಾಬೀತುಪಡಿಸುವ ಸಲುವಾಗಿ, ಪ್ರಾಸಿಕ್ಯೂಷನ್ ಪಿಡಬ್ಲ್ಯು -1 ರಿಂದ 17 ರವರೆಗಿನ ಎಲ್ಲರನ್ನೂ ವಿಚಾರಣೆಗೊಳಪಡಿಸಿದ ಹಾಗೂ ಪಿ.ಡಬ್ಲ್ಯು 1 ರಿಂದ 26 ರವರೆಗಿನ ದಾಖಲೆಗಳನ್ನು ಮತ್ತು 1 ರಿಂದ 14 ರವರೆಗಿನ ಮುದ್ದೆ ಮಾಲುಗಳನ್ನು ಗುರುತಿಸಲಾಗಿದೆ.

ಆರೋಪಿಯ ವಿರುದ್ಧ ಹಾಜರುಪಡಿಸಿದ ಅಪರಾಧ ಸಾಬೀತುಗೊಳಿಸುವ ಎಲ್ಲಾ ಸಾಕ್ಷ್ಯಗಳನ್ನು ಆತನು ಅಲ್ಲಗಳೆದಿದ್ದಾನೆ.ಆದಾಗ್ಯೂ, ಆತನು ಯಾವುದೇ ಸಾಕ್ಷ್ಯವನ್ನು ಮಂಡಿಸುವುದನ್ನು ಆಯ್ಕೆ ಮಾಡಿಕೊಂಡಿರುವುದಿಲ್ಲ.

ಮಾನ್ಯ ವಿಶೇಷ ನ್ಯಾಯಾಧೀಶರು, ಆರೋಪಿಸಲಾದ ಅಪರಾಧಗಳ ಸಂಬಂಧದಲ್ಲಿ ಆರೋಪಿಯನ್ನು ಅಪರಾಧಿಯೆಂದು ನಿರ್ಣಯಿಸಲು ಪುರಾವೆಗಳನ್ನು ಮತ್ತು ಮಂಡಿಸಲಾದ ದಾಖಲೆಯಲ್ಲಿನ ಸಾಕ್ಷ್ಯಗಳನ್ನು ಪರಿಗಣಿಸಿದ ನಂತರ, ಈ ಕೆಳಗಿನಂತೆ ಆತನಿಗೆ ಶಿಕ್ಷೆ ವಿಧಿಸಿದರು.

" ಭಾರತ ದಂಡ ಸಂಹಿತೆಯ 363 ನೇ ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧಗಳಿಗಾಗಿ 2,000 ರೂ.ಗಳ ಜುಲ್ಮಾನೆಯೊಂದಿಗೆ 7 ವರ್ಷಗಳ ಅವಧಿಯ ಸಾದಾ ಸೆರೆವಾಸಕ್ಕೆ ಗುರಿಯಾಗುವ ಶಿಕ್ಷೆಯನ್ನು ಆರೋಪಿಗೆ ವಿಧಿಸಲಾಗಿದೆ.ಜುಲ್ಮಾನೆ ಸಂದಾಯ ಮಾಡಲು ತಪ್ಪಿದ ಸಂದರ್ಭದಲ್ಲಿ, ಆತನು ಒಂದು ತಿಂಗಳ ಹೆಚ್ಚಿನ ಸೆರೆವಾಸಕ್ಕೆ ಗುರಿಯಾಗುವನು.

ಭಾರತ ದಂಡ ಸಂಹಿತೆಯ 376 ( 2) ( i) ನೇ ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧಕ್ಕಾಗಿ 5,000/- ರೂ.ಗಳ ಜುಲ್ಮಾನೆಯೊಂದಿಗೆ 7 ವರ್ಷಗಳ ಅವಧಿಯ ಸಾದಾ ಸೆರೆವಾಸಕ್ಕೆ ಗುರಿಯಾಗುವ ಶಿಕ್ಷೆಯನ್ನು ಆರೋಪಿಗೆ ವಿಧಿಸಲಾಗಿದೆ.ಜುಲ್ಮಾನೆ ಸಂದಾಯ ಮಾಡಲು ತಪ್ಪಿದ ಸಂದರ್ಭದಲ್ಲಿ, ಆತನು ಒಂದು ಒಂದು ತಿಂಗಳ ತಿಂಗಳ ಹೆಚ್ಚಿನ ಹೆಚ್ಚಿನ ಸೆರೆವಾಸಕ್ಕೆ ಗುರಿಯಾಗುವನು.

ಪಕ್ಕೆ ಅಧಿನಿಯಮದ 6 ನೇ ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧಕ್ಕಾಗಿ 5,000/- ರೂ.ಗಳ ಜುಲ್ಮಾನೆಯೊಂದಿಗೆ 10 ವರ್ಷಗಳ ಅವಧಿಯ ಸಾದಾ ಸೆರೆವಾಸಕ್ಕೆ ಗುರಿಯಾಗುವ ಶಿಕ್ಷೆಯನ್ನು ಆರೋಪಿಗೆ ವಿಧಿಸಲಾಗಿದೆ.ಜುಲ್ಮಾನೆ ಸಂದಾಯ ಮಾಡಲು ತಪ್ಪಿದ ಸಂದರ್ಭದಲ್ಲಿ, ಆತನು ಒಂದು ತಿಂಗಳ ಹೆಚ್ಚಿನ ಸೆರೆವಾಸಕ್ಕೆ ಗುರಿಯಾಗುವನು. "

ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಅಪರಾಧ ನಿರ್ಣಯ ಮತ್ತು ಶಿಕ್ಷೆ ಕುರಿತು ಹೇಳಿದ ತೀರ್ಪ ಮತ್ತು ಆದೇಶದಿಂದ ಬಾಧಿತನಾಗಿ ಆರೋಪಿಯು ಈ ಅಪೀಲನ್ನು ಸಲ್ಲಿಸಿದ್ದಾನೆ.

4. ಆರೋಪಿಯ ವಿರುದ್ಧ ಆರೋಪಿಸಲಾದ ಅಪರಾಧಗಳ ಸಂಬಂಧದಲ್ಲಿ ಆತನು ಆರೋಪಿಯೆಂದು ನಿರ್ಣಯಿಸಲು, ಆತನ ವಿರುದ್ಧ ನಿರುಪಾಧಿಕವಾಗಿ ಯಾವುದೇ ಸಾಕ್ಷ್ಯವಿಲ್ಲ ಎಂಬುದು ಅಪೀಲುದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ವಾದವಾಗಿದೆ.ಅಧಿವಿಚಾರಣಾ ನ್ಯಾಯಾಲಯವು ತಪ್ಪಾಗಿ ಅಪರಾಧ ನಿರ್ಣಯಿಸಿ, ಶಿಕ್ಷೆಯ ಆದೇಶವನ್ನು ಹೊರಡಿಸಿದೆ ಮತ್ತು ಅದು ನ್ಯಾಯದ ವಿಫಲತೆಯಾಗಿ ಪರಿಣಮಿಸಿದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ನಿಶಾನೆ ಪಿ .3 ಮತ್ತು 5 ಎಂದು ಗುರುತಿಸಲಾಗಿರುವ ಸಂತ್ರಸ್ತೆಯ ಹೇಳಿಕೆಯನ್ನು ಅಧಿವಿಚಾರಣಾ ನ್ಯಾಯಾಲಯವು ಅವಲಂಬಿಸಿದ್ದು, ಅವುಗಳನ್ನು ತನಿಖಾವಧಿಯಲ್ಲಿ ದಾಖಲಿಸಲಾಗಿತ್ತು ಎಂದು ಅವರು ವಾದಿಸಿದ್ದಾರೆ.ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 161 ನೇ ಪ್ರಕರಣದ

ಅಡಿಯಲ್ಲಿ ದಾಖಲಿಸಿದ ಹೇಳಕೆಯನ್ನು ಸಾಕ್ಷ್ಯವೆಂದು ಗುರುತಿಸಬಾರದಾಗಿತ್ತಾದ್ದರಿಂದ, ಅಧಿವಿಚಾರಣಾ ನ್ಯಾಯಾಲಯವು ಸದರಿ ಹೇಳಿಕೆಗಳನ್ನು ಅವಲಂಬಿಸಿ ಆರೋಪಿಯನ್ನು ಅಪರಾಧಿಯೆಂದು ನಿರ್ಣಯಿಸಲು ಕ್ರಮ ಜರುಗಿಸಿದ್ದು, ಇದನ್ನು ಸಾಕ್ಷ್ಯದಲ್ಲಿ ಒಪ್ಪಲಾಗುವುದಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.ಸ್ವತಃ ಸಂತ್ರಸ್ತೆಯು, ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಂಪೂರ್ಣವಾಗಿ ಅಲ್ಲಗಳೆದಿರುವಾಗ ಮತ್ತು ವೈದ್ಯಕೀಯ ವರದಿಯು ಸಹ ನಕಾರಾತ್ಮಕವಾಗಿದ್ದು, ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಮರ್ಥಿಸದಿರುವಾಗ, ಆರೋಪಿಯ ಅಪರಾಧ ನಿರ್ಣಯಿಸುವುದನ್ನು ಅಧಿವಿಚಾರಣಾ ನ್ಯಾಯಾಲಯವು ಸಮರ್ಥಿಸಿಕೊಂಡಿರುವುದಿಲ್ಲ ಎಂದು ಅವರು ವಾದಿಸಿದ್ದಾರೆ.ನಿಶಾನೆ ಪಿ .4 ಎಂದು ಗುರುತಿಸಲಾಗಿರುವ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 164 ನೇ ಪ್ರಕರಣದ ಅಡಿಯಲ್ಲಿ ದಾಖಲಿಸಿದ ಹೇಳಿಕೆಯು, ಆರೋಪಿಯನ್ನು ಆರೋಪದಲ್ಲಿ ಸಿಕ್ಕಿಸುವುದಿಲ್ಲ ಮತ್ತು ಹಾಗಿಲ್ಲದಿದ್ದರೂ ಸಹ, ಸದರಿ ಹೇಳಿಕೆಯು ಮುಖ್ಯ ಸಾಕ್ಷ್ಯವಾಗುವುದಿಲ್ಲ ಹಾಗೂ ಯಾವುದೇ ಪುಷ್ಟಿಕರಿಸುವ ಸಾಕ್ಷ್ಯವಿಲ್ಲದೆ, ಅದನ್ನು ಅವಲಂಬಿಸಲಾಗುವುದಿಲ್ಲ ಎಂದು ಅವರು ನಿವೇದಿಸಿಕೊಂಡಿದ್ದಾರೆ.

ಘಟನೆ ನಡೆದ ಸಮಯದಲ್ಲಿ ಸಂತ್ರಸ್ತೆಯು ಅಪ್ರಾಪ್ತಳಾಗಿದ್ದಳು ಎಂಬ ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಒಪ್ಪಿಕೊಂಡರೂ ಸಹ, ಆರೋಪಿಯ ಅಪರಾಧವನ್ನು ಸಾಬೀತುಪಡಿಸುವ ಯಾವುದೇ ತರ್ಕಬದ್ಧ ಸಾಕ್ಷ್ಯವಿಲ್ಲದೆ, ಅಧಿ ವಿಚಾರಣಾ ನ್ಯಾಯಾಲಯವು ಆರೋಪಿಯ ಅಪರಾಧವನ್ನು ಸಿದ್ಧಪಡಿಸಲಾಗುವುದಿಲ್ಲವೆಂದು ಅವರು ವಾದಿಸಿದ್ದು, ಆದುದರಿಂದ, ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಮತ್ತು ಆದೇಶವನ್ನು ತಳ್ಳಿಹಾಕಬೇಕೆಂದು ಕೋರಿದ್ದಾರೆ.

ತಮ್ಮ ವಾದದ ಸಮರ್ಥನೆಗೆ, ಮಾನ್ಯ ನ್ಯಾಯವಾದಿಗಳು ಈ ಮುಂದಿನ ನಿರ್ಣಯಗಳನ್ನು ಅವಲಂಬಿಸಿದ್ದಾರೆ:

1) ಎಸ್. ವರದರಾಜನ್ -ವಿರುದ್ಧ-ಮದ್ರಾಸ್ ರಾಜ್ಯ '

2) ಉತ್ಪಲ್ ದಾಸ್ ಮತ್ತು ಇನ್ನೊಬ್ಬರು ವಿರುದ್ಧ ಪಶ್ಚಿಮ ಬಂಗಾಳ ರಾಜ್ಯ

ಇದಕ್ಕೆ ತದ್ವಿರುದ್ಧವಾಗಿ, ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ನ್ಯಾಯವಾದಿಗಳ (ಫೀಡರ್) ವಾದವೆಂದರೆ, ಸಂತ್ರಸ್ತೆಯು ಸುಮಾರು 16 ವರ್ಷ ವಯೋಮಾನದವಳಾಗಿರುವುದರಿಂದ, ಘಟನೆ ನಡೆದ ಸಮಯದಲ್ಲಿ ಆಕೆಯು

1. ಎಐಆರ್ 1965 ಸರ್ವೋಚ್ಚ ನ್ಯಾಯಾಲಯ 942

2. ಎಐಆರ್ 2010 ಸರ್ವೋಚ್ಚ ನ್ಯಾಯಾಲಯ 1894

ಅಪ್ರಾಪ್ತಳಾಗಿದ್ದಳು ಎಂಬುದನ್ನು ಪ್ರಾಸಿಕ್ಯೂಷನ್ ಸಾಬೀತುಪಡಿಸಿದೆ; ಪಿ.ಡಬ್ಲ್ಯು .11 ಮತ್ತು 13 ರ ಸಾಕ್ಷ್ಯದಿಂದ ಮತ್ತು ನಿಶಾನೆ ಪಿ .9 ರಿಂದ 11 ವರೆಗಿನ ಮತ್ತು 15 ನೇ ದಸ್ತಾವೇಜುಗಳಿಂದ ಇದನ್ನೇ ಸಾಬೀತುಪಡಿಸಲಾಗಿದೆ.ಸಂತ್ರಸ್ತೆಯ ಪೋಷಕರನ್ನು ಪಿಡಬ್ಲ್ಯು ಶಿ 1 ಮತ್ತು 8 ಎಂದು ವಿಚಾರಣೆ ಮಾಡಲಾಗಿದ್ದು, ಅವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯು ಸಂತ್ರಸ್ತ ಬಾಲಕಿಯನ್ನು ಪ್ರಚೋದಿಸಿ ಅಪಹರಿಸಿರುವನೆಂದು ಮತ್ತು ಮೊದಲಿನ ಸಂದರ್ಭದಲ್ಲೂ ಸಹ, ಆತನು ಆಕೆಯನ್ನು ಅಪಹರಿಸಿದ್ದನು ಎಂದು ಸ್ಪಷ್ಟವಾಗಿ ಹೇಳಿದ್ದಾರೆ.ಪಿಡಬ್ಲ್ಯು.ಮತ್ತು 8 ಇವರ ಸಾಕ್ಷ್ಯವನ್ನು ಪಿ.ಡಬ್ಲ್ಯು.3 ಮತ್ತು 9 ಇವರ ಸಾಕ್ಷ್ಯವು

ಮತ್ತಷ್ಟು ಪುಷ್ಟೀಕರಿಸುತ್ತದೆಂದು ಅವರು ನಿವೇದಿಸಿಕೊಂಡಿದ್ದಾರೆ.ವೈದ್ಯರ ಮುಂದೆ ನೀಡಲಾದ ಸಂತ್ರಸ್ತೆಯ ವೃತ್ತಾಂತವು ಸಹ, ಆರೋಪಿಯು ಸಂತ್ರಸ್ತೆಯನ್ನು ಅಪಹರಿಸಿ, ತರುವಾಯ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾನೆ ಎಂಬುದನ್ನು ಸ್ಥಿರೀಕರಿಸುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ ಮತ್ತು ಅದರಿಂದಾಗಿ, ಸಂಶಯಾತೀತವಾಗಿ ಆರೋಪಿಯ ಅಪರಾಧವನ್ನು ಸಾಬೀತುಪಡಿಸಲು ಪ್ರಾಸಿಕ್ಯೂಷನ್ ಸಮರ್ಥವಾಗಿದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ತದನುಸಾರವಾಗಿ, ಅಪೀಲನ್ನು ವಜಾಗೊಳಿಸಲು ಅವರು ಕೋರಿದ್ದಾರೆ.

5. ಮೊದಲನೆಯದಾಗಿ, ಅಧಿವಿಚಾರಣಾ ನ್ಯಾಯಾಲಯವು, ಭಾರತ ದಂಡ ಸಂಹಿತೆಯ 363 ನೇ ಮತ್ತು 376 ( 2) (i) ನೇ ಪ್ರಕರಣಗಳ ಹಾಗೂ ಪೋಕ್ಸೊ ಅಧಿನಿಯಮದ 6 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಗಳಿಗಾಗಿ ಆರೋಪಿಯ/ಅಪೀಲುದಾರನ ಆರೋಪವನ್ನು ನಿರ್ಣಯಿಸಿದ ನಂತರ, ಭಾರತ ದಂಡ ಸಂಹಿತೆಯ 376 ( 2) (    i) ನೇ ಪ್ರಕರಣದ ಹಾಗೂ ಪೋಕೊ ಅಧಿನಿಯಮದ 6 ನೇ ಪ್ರಕರಣದ ಅಡಿಯಲ್ಲಿನ ಎರಡೂ ಅಪರಾಧಗಳಿಗಾಗಿ ಆತನಿಗೆ ಶಿಕ್ಷೆ ವಿಧಿಸಿದೆ.ಪೋಕ್ಕೆ ಅಧಿನಿಯಮದ 42 ನೇ ಪ್ರಕರಣದ ಅಭಿಪ್ರಾಯದಲ್ಲಿ, ಅಪರಾಧಿಯು ಪೈಕೋ ಅಧಿನಿಯಮ ಅಷ್ಟೇ ಅಲ್ಲದೆ ಭಾರತ ದಂಡ ಸಂಹಿತೆಯ ಅಡಿಯಲ್ಲಿನ ಅಂಥ ದಂಡನೀಯ ಅಪರಾಧಗಳ ಅಪರಾಧಿಯೆಂದು ಕಂಡುಬಂದಾಗ, ಆತನು ಪೋಕ್ಸ್ ಅಧಿನಿಯಮ ಅಥವಾ ಭಾರತ ದಂಡ ಸಂಹಿತೆ, ಈ ಎರಡರ ಪೈಕಿ ಯಾವುದರ ಅಪರಾಧದ ಪ್ರಮಾಣ ಹೆಚ್ಚಿದೆಯೋ ಅದರ ಅಡಿಯಿಲ್ಲಿ ದಂಡನೆಗೆ ಗುರಿಯಾಗತಕ್ಕದ್ದು ಎಂದಿದೆ.ಆದುದರಿಂದ, ಅಧಿವಿಚಾರಣಾ ನ್ಯಾಯಾಲಯವು, ಭಾರತ ದಂಡ ಸಂಹಿತೆಯ 376 ( 2) (    i) ನೇ ಪ್ರಕರಣ ಹಾಗೂ ಪೋಕ್ಸೊ ಅಧಿನಿಯಮದ 6 ನೇ ಪ್ರಕರಣದ ಅಡಿಯಲ್ಲಿನ ಎರಡೂ ಅಪರಾಧಗಳಿಗಾಗಿ ಆರೋಪಿಯ ವಿರುದ್ಧ ಶಿಕ್ಷೆ ವಿಧಿಸುವುದು ಸೂಕ್ತವಾಗಿರಲಿಲ್ಲ.ಎ

6. ಪ್ರಾಸಿಕ್ಯೂಷನ್ ಮೊಕದ್ದಮೆಯೆಂದರೆ,ದಿನಾಂಕ: 02.12.2016 ರಂದು ಬೆಳಿಗ್ಗೆ 4.00 ಗಂಟೆಗೆ, ಆರೋಪಿಯು ಪಿ.ಡಬ್ಲ್ಯು .2, ಅಪ್ರಾಪ್ತಿಯನ್ನು ಮದುವೆಯಾಗುವ ಉದ್ದೇಶದಿಂದ ಪ್ರಚೋದಿಸಿ, ಆಕೆಯನ್ನು ನೀಲತ್ತೂರು ಗ್ರಾಮದಲ್ಲಿರುವ ಆಕೆಯ ಮನೆಯಿಂದ ಅಪಹರಿಸಿದ್ದನು ಮತ್ತು ಆಕೆಯನ್ನು ಅಪಹರಿಸಿದ ನಂತರ, ಆಕೆಯನ್ನು ಶ್ರೀನಿವಾಸಪುರಕ್ಕೆ ಮತ್ತು ನಂತರ ಮದನಪಲ್ಲಿಗೆ ಹಾಗೂ ಅಲ್ಲಿಂದ ಆಂಧ್ರ ಪ್ರದೇಶದಲ್ಲಿರುವ ತಂಬಲಪಲ್ಲಿಯ ಅಂಗಲ್ಲು ಗ್ರಾಮದಲ್ಲಿರುವ ನಾಗರಾಜ್ [ಸಿ.ಡಬ್ಲ್ಯು .11] ಎಂಬಾತನ ಮನೆಗೆ ಕರೆದುಕೊಂಡು ಹೋಗಿದ್ದನು ಹಾಗೂ ಆಕೆಯ ಮೇಲೆ ತೀವ್ರತರ ಮರ್ಮಾಂಗಬೇಧಕ ಲೈಂಗಿಕ ಅತ್ಯಾಚಾರ ಎಸಗಿದ್ದಾನಾದ್ದರಿಂದ ಮೇಲೆ ಆರೋಪಿಸಲಾದ ಅಪರಾಧಗಳನ್ನು ಆತನು ಎಸಗಿದ್ದಾನೆ.

7. ಸಂತ್ರಸ್ತ ಬಾಲಕಿಯು ಅಪ್ರಾಪ್ತಯಾಗಿದ್ದಳೆಂಬುದನ್ನು ಸಾಬೀತುಪಡಿಸಲು, ಪ್ರಾಸಿಕ್ಯೂಷನ್ ಪಿ.ಡಬ್ಲ್ಯು .11-ಶ್ರೀನಿವಾಸಪುರದ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನ ಉಪ-ಪ್ರಾಂಶುಪಾಲರನ್ನು ವಿಚಾರಣೆ ಮಾಡಿದ್ದಾರೆ.ಆಕೆ ನಿಶಾನೆ ಪಿ .9 ರಿಂದ 11 ರವರೆಗಿನ ದಾಖಲೆಗಳನ್ನು ನೀಡಿರುತ್ತಾಳೆ.ನಿಶಾನೆ ಪಿ .9 ಸಂತ್ರಸ್ತೆಯ ವಯಸ್ಸಿನ ಪ್ರಮಾಣಪತ್ರವಾಗಿದೆ.ನಿಶಾನೆ ಪಿ .10 ದಾಖಲಾತಿ ನೋಂದಣಿಯ ಪತಿಯಾಗಿದ್ದು, ನಿಶಾನೆ ಪಿ .11 ಶಾಲಾ ದಾಖಲಾತಿಯ ಉದ್ದೃತ ಭಾಗದ ಪ್ರತಿಯಾಗಿದೆ.

8. ಪಿ.ಡಬ್ಲ್ಯು, 11 ನೀಡಿದ ಪ್ರಮಾಣಪತ್ರ ನಿಶಾನೆ ಪಿ .9 ರಲ್ಲಿ, ಶಾಲಾ ದಾಖಲಾತಿಗಳ ಪ್ರಕಾರ, ಸಂತ್ರಸ್ತೆಯ ಜನ್ಮ ದಿನಾಂಕವು 18.01.2000 ಆಗಿದೆ ಎಂದು ಹೇಳಲಾಗಿದೆ.ನಿಶಾನೆ ಪಿ .10 ರಲ್ಲಿ, ಸಂತ್ರಸ್ತೆಯ ಹೆಸರು ಕ್ರಮ ಸಂಖ್ಯೆ 22 ರಲ್ಲಿದ್ದು, ಅದರಲ್ಲಿ ಆಕೆಯ ಜನ್ಮ ದಿನಾಂಕವನ್ನು 18.09.2000 ಎಂದು ಉಲ್ಲೇಖಿಸಲಾಗಿದೆ.ವಯಸ್ಸಿನ

ಪ್ರಮಾಣಪತ್ರದಲ್ಲಿ ಪ್ರಮಾದದಿಂದ ಜನ್ಮ ದಿನಾಂಕವನ್ನು 18.09.2000 ಕ್ಕೆ ಬದಲಾಗಿ 18.01.2000 ಎಂದು ನಮೂದಿಸಲಾಗಿತ್ತು ಎಂದು ಪಿ.ಡಬ್ಲ್ಯು .11 ಹೇಳಿದ್ದಾರೆ.ಅವರು ಸಂತ್ರಸ್ತ ಬಾಲಕಿಯ ಜನ್ಮ ದಿನಾಂಕ 18.09.2000 ಎಂದು ಹೇಳಿದ್ದಾರೆ.ಸದರಿ ಪ್ರಮಾಣಪತ್ರವನ್ನು ಪೊಲೀಸರ ಸೂಚನೆಯಂತೆ ನೀಡಲಾಗಿತ್ತು ಮತ್ತು ಪೊಲೀಸರ ಹೇಳಿಕೆ ಪ್ರಕಾರ ತಾನು ಸುಳ್ಳು ಪ್ರಮಾಣಪತ್ರವನ್ನು ನೀಡಿರುವುದನ್ನು ಅವರು ಅಲ್ಲಗಳೆದಿದ್ದಾರೆ.

9. ಪ್ರಾಸಿಕ್ಯೂಷನ್ ಪಿ.ಡಬ್ಲ್ಯು .13-ವೈದ್ಯರನ್ನು ವಿಚಾರಣೆಗೊಳಪಡಿಸಿದ್ದು, ಅವರು ಸಂತ್ರಸ್ತೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ತಪಾಸಣೆ ಸಮಯದಲ್ಲಿ,ದಿನಾಂಕ: 28.12.2016 ರಂದು ಸಂತ್ರಸ್ತೆಯು ಸುಮಾರು 16 ರಿಂದ 18 ವರ್ಷ ವಯಸ್ಸಿನವಳಾಗಿದ್ದಳು ಎಂದು ಹೇಳಿ ನಿಶಾನೆ ಪಿ .15 ರಂತೆ ಪ್ರಮಾಣಪತ್ರವನ್ನು ನೀಡಿದ್ದಾರೆ.ಸಂತ್ರಸ್ತ ಬಾಲಕಿಯ ಜನ್ಮ ದಿನಾಂಕವನ್ನು 18.09.2000 ಅಥವಾ 18.01.2000 ಎಂದು ತೆಗೆದುಕೊಂಡರೂ, ಘಟನೆ ನಡೆದ ಸಮಯದಲ್ಲಿ ಆಕೆಯು ಅಪ್ರಾಪ್ತಳಾಗಿದ್ದಳು.ಪ್ರತಿವಾದಿ ವಕೀಲರು ಸಂತ್ರಸ್ತೆಯ ವಯಸ್ಸನ್ನು ತೀವ್ರತರವಾಗಿ ವಿವಾದಗೊಳಿಸಿರುವುದಿಲ್ಲ.ಪಿ.ಡಬ್ಲ್ಯೂ, 11 ಮತ್ತು 13 ಇವರ ಸಾಕ್ಷ್ಯದಿಂದ, ಸಂತ್ರಸ್ತೆಯು 18 ವರ್ಷಗಳಿಗಿಂತ ಕಡಿಮೆ ವಯಸ್ಸಿನವಳಾಗಿದ್ದಳು ಮತ್ತು ಘಟನೆ ನಡೆದ ಸಮಯದಲ್ಲಿ ಆಕೆಯು ಅಪ್ರಾಪ್ತಳಾಗಿದ್ದಳು ಎಂಬುದನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ಸಮರ್ಥವಾಗಿದೆ.

10. ಸಂತ್ರಸ್ತೆಯನ್ನು ಪಿ.ಡಬ್ಲ್ಯು .2 ಎಂಬುದಾಗಿ ಅಧಿವಿಚಾರಣಾ ನ್ಯಾಯಾಲಯದ ಮುಂದೆ ವಿಚಾರಣೆಗೊಳಪಡಿಸಲಾಯಿತು.ಪ್ರಾಸಿಕ್ಯೂಷನ್ ಪ್ರಕಾರ, ಆರೋಪಿಯುದಿನಾಂಕ: 02.12.2016 ರಂದು ಸುಮಾರು ಬೆಳಿಗ್ಗೆ 4.00 ಗಂಟೆಗೆ ಆಕೆಯ ಮನೆಯಿಂದ ಆಕೆಯನ್ನು ಪ್ರಚೋದಿಸಿ ಅಪಹರಣ ಮಾಡಿದ್ದನು.ಆ ತರುವಾಯ, ಆಕೆಯನ್ನು ಶ್ರೀನಿವಾಸಪುರಕ್ಕೆ ಮತ್ತು ನಂತರ ಮದನಪಲ್ಲಿಗೆ ಹಾಗೂ ಅಲ್ಲಿಂದ ಆಂಧ್ರ ಪ್ರದೇಶದಲ್ಲಿರುವ ತಂಬಲಪಲ್ಲಿಯ ಅಂಗಲ್ಲು ಗ್ರಾಮದ ಸಿ.ಡಬ್ಲ್ಯು.11 ನಾಗರಾಜ್ ಮನೆಗೆ ಕರೆದುಕೊಂಡು ಹೋಗಿ, ಆಕೆಯ ಮೇಲೆ ತೀವ್ರತರ ಮರ್ಮಾಂಗಬೇಧಕ ಲೈಂಗಿಕ ಅತ್ಯಾಚಾರ ಎಸಗಿದ್ದನು.ಆದಾಗ್ಯೂ, ಪಿ.ಡಬ್ಲ್ಯು .2 ಖಡಾಖಂಡಿತವಾಗಿ ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಅಲ್ಲಗಳೆದಿದ್ದಾಳೆ.ತನ್ನ ಸಾಕ್ಷ್ಯದಲ್ಲಿ ಆಕೆಯು, ತನ್ನ ಜನ್ಮ ದಿನಾಂಕವು 18.09.2000 ಎಂದು ಮತ್ತು ತನ್ನನ್ನು ಯಾರೂ ಅಪಹರಿಸಿಲ್ಲವೆಂದು ಆಕೆಯು ಹೇಳಿದ್ದಾಳೆ.ಆರೋಪಿಯು ತನ್ನನ್ನು ಅಪಹರಿಸಿ, ಆಂಧ್ರ ಪ್ರದೇಶಕ್ಕೆ ಕರೆದುಕೊಂಡು ಹೋಗಿ, ತನ್ನ ಮೇಲೆ ಅತ್ಯಾಚಾರ ಎಸಗಿಲ್ಲವೆಂದು ಹೇಳಿದ್ದಾಳೆ.ನಿಶಾನೆ ಪಿ.ಡಿಯಲ್ಲಿರುವ ಹೇಳಿಕೆಗೆ ತಾನು ಸಹಿ ಮಾಡಿರುವುದನ್ನು ಆಕೆಯು ಒಪ್ಪಿಕೊಂಡಿದ್ದಾಳೆ.ಆದಾಗ್ಯೂ, ತನ್ನ ತಂದೆಯು ಇದೇ ಹೇಳಿಕೆಯನ್ನು ನೀಡಿರುವುದಾಗಿ ಆಕೆಯು ಹೇಳಿದ್ದಾಳೆ.ತನ್ನನ್ನು ವೈದ್ಯರು ಪರೀಕ್ಷಿಸಿಲ್ಲವೆಂದು ಮತ್ತು ಆಕೆಯ ಉಡುಪುಗಳನ್ನು ಸಂಗ್ರಹಿಸಿಲ್ಲವೆಂದು ಆಕೆಯು ಹೇಳಿದ್ದಾಳೆ.ತನ್ನ ಹೇಳಿಕೆಯನ್ನು ದಂಡಾಧಿಕಾರಿಗಳು (ಮ್ಯಾಜಿಸ್ಟ್ರೇಟರು) ದಾಖಲಿಸಿದ್ದರು ಎಂದು ಆಕೆ ಹೇಳಿದ್ದಾಳೆ.ಆದಾಗ್ಯೂ, ನಿಶಾನೆ ಪಿ .4 ರಲ್ಲಿ ದಾಖಲಿಸಿದಂತೆ ಯಾವುದೇ ಹೇಳಿಕೆಯನ್ನು ತಾನು ನೀಡಿಲ್ಲವೆಂದು ಆಕೆಯು ಹೇಳಿದ್ದಾಳೆ.ಪ್ರಾಸಿಕ್ಯೂಷನ್ ಆಕೆಯೊಂದಿಗೆ ಪ್ರತಿಕೂಲಕರವಾಗಿ ವರ್ತಿಸಿತ್ತೆಂದು ಹೇಳಿದ್ದಾಳೆ.ಆರೋಪಿಯು ಆಕೆಯನ್ನು ಪ್ರಚೋದಿಸುವ ಮೂಲಕ ಆಕೆಯನ್ನು ಅಪಹರಿಸಿ, ಆಕೆಯ ಮೇಲೆ ತೀವ್ರತರ ಮರ್ಮಾಂಗಬೇಧಕ ಲೈಂಗಿಕ ಅತ್ಯಾಚಾರ ಎಸಗಿದ್ದನೆಂಬುದನ್ನು ತೋರಿಸಲು ಆಕೆಯ ಪಾಟಿ-ಸವಾಲಿನಿಂದ ಏನೂ ವ್ಯಕ್ತವಾಗಿರುವುದಿಲ್ಲ.

11. ಪ್ರಾಸಿಕ್ಯೂಷನ್ ಪಿ.ಡಬ್ಲ್ಯು.ಮತ್ತು 8 ಎಂದು ಪರೀಕ್ಷಿಸಲ್ಪಟ್ಟ ಸಂತ್ರಸ್ತೆಯ ತಂದೆ-ತಾಯಿಗಳ ಸಾಕ್ಷ್ಯ ಹಾಗೂ ಪಿ.ಡಬ್ಲ್ಯು, 3 ಮತ್ತು 9 ಇವರ ಸಾಕ್ಷ್ಯವನ್ನು ಹೆಚ್ಚಾಗಿ ಅವಲಂಬಿಸಿದೆ.ನಿಶಾನೆ-ಪಿ .1 ರಲ್ಲಿ, ಸಂತ್ರಸ್ತೆಯ ತಂದೆಯು,ದಿನಾಂಕ: 01.12.2016 ರ ರಾತ್ರಿ ಎಲ್ಲರೂ ಮಲಗಿದ ನಂತರ, ಬೆಳಗಿನ ಜಾವ 4.00 ಗಂಟೆಗೆ, ಅವರ ಮಗಳು ಮನೆಯಿಂದ ಹೊರಗೆ ಹೋದಳು ಮತ್ತು ತರುವಾಯ, ಆಕೆಯು ಹಿಂದಿರುಗಲಿಲ್ಲವಾದ್ದರಿಂದ, ಸದರಿ ದಿನಾಂಕಕ್ಕೆ ಸುಮಾರು 25 ದಿನಗಳ ಮೊದಲು, ಆರೋಪಿಯು ಅವರ ಮಗಳನ್ನು ಅಪಹರಿಸಿದ್ದಂಥ ಈ ಮುಂಚಿನ ಸಂದರ್ಭದಿಂದಾಗಿ ಅವರು ಆರೋಪಿಯ ಮೇಲೆ ಸಂಶಯ ತಾಳಿದರು ಎಂದು ಹೇಳಿದ್ದನ್ನು ಗಮನಿಸುವುದು ಸುಸಂಗತವಾಗಿದೆ.ಸದರಿ ದೂರಿನ ಆಧಾರದ ಮೇಲೆ, ಪಿ.ಡಬ್ಲ್ಯು .17 ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿದ್ದರು.

12. ಮುಂಚಿನ ಸಂದರ್ಭದಲ್ಲೂ ಸಹ ಆರೋಪಿಯು ತಮ್ಮ ಮಗಳನ್ನು ಅಪಹರಿಸಿದ್ದನು ಮತ್ತು ಈ ಸಂಬಂಧದಲ್ಲಿ ಅವರು ದೂರನ್ನು ಸಲ್ಲಿಸಿದ್ದರೆಂದು ಪಿ.ಡಬ್ಲ್ಯು.ಹೇಳಿದಾಗ್ಯೂ, ಆರೋಪಿಯ ವಿರುದ್ಧ ಅಂಥ ಯಾವುದೇ ದೂರನ್ನು ಸಲ್ಲಿಸಿದ್ದರೆಂದು ಅಥವಾ ದಾಖಲಿಸಿದ್ದರೆಂದು ತೋರಿಸಲು ದಾಖಲೆಯಲ್ಲಿ ಏನನ್ನು ಮಂಡಿಸಿಲ್ಲ.ಪಂಚಾಯಿತಿ ಕರೆಯಲಾಗಿತ್ತು ಮತ್ತು ತರುವಾಯ, ಅವರ ಮಗಳನ್ನು ಆತನು ಕಳುಹಿಸಿದ್ದನು ಎಂದು ಪಿ.ಡಬ್ಲ್ಯು.!ಹೇಳಿದ್ದಾರೆ.ಈ ಸಂಬಂಧದಲ್ಲಿ, ಪ್ರಾಸಿಕ್ಯೂಷನ್ ಪಿ.ಡಬ್ಲ್ಯು .9 ನ್ನು ವಿಚಾರಣೆಗೊಳಪಡಿಸಿದ್ದಾರೆ.ಸಂತ್ರಸ್ತ ಬಾಲಕಿಯು ಮನೆ ಪಾಠಕ್ಕೆ (ಟ್ಯೂಷನ್ಗೆ) ಹಾಜರಾಗುತ್ತಿದ್ದಾಗ, ಆರೋಪಿಯು ಆಕೆಯನ್ನು ಪ್ರೇರೇಪಿಸಿ, ಅಪಹರಿಸಿದ್ದಾನೆಂದು ಅವರು ಹೇಳಿದ್ದಾರೆ.ಮಾರನೆಯ ದಿನದಂದು ಶ್ರೀನಿವಾಸಪುರ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಲಾಗಿತ್ತು ಮತ್ತು ತರುವಾಯ ಆಕೆಯನ್ನು ಕಾಪಾಡಲಾಗಿತ್ತು ಮತ್ತು ಪಂಚಾಯಿತಿಯನ್ನು ಕರೆಯಲಾಗಿತ್ತು.ಮೇಲೆ ಗಮನಿಸಿದಂತೆ, ಆರೋಪಿಯು ಹಿಂದಿನ ಸಂದರ್ಭದಲ್ಲಿ ಸಂತ್ರಸ್ತ ಬಾಲಕಿಯುನ್ನು ಅಪಹರಿಸಿದ್ದನೆಂದು ಮತ್ತು ಈ ಸಂಬಂಧದಲ್ಲಿ ಪ್ರಕರಣವನ್ನು ದಾಖಲಿಸಲಾಗಿತ್ತೆಂದು ಪಿ.ಡಬ್ಲ್ಯು.ಮತ್ತು 9 ಹೇಳಿದಾಗ್ಯೂ, ಪ್ರಾಸಿಕ್ಯೂಷನ್ ಯಾವುದೇ ದಸ್ತಾವೇಜನ್ನು ಹಾಜರುಪಡಿಸಿರುವುದಿಲ್ಲ ಮತ್ತು ಗುರುತಿಸಿರುವುದಿಲ್ಲ.

13. ಸಂತ್ರಸ್ತ ಬಾಲಕಿಗೆ ತೊಂದರೆ ಕೊಡುವುದಿಲ್ಲವೆಂದು ಆರೋಪಿಯು ಲಿಖಿತದಲ್ಲಿ ವಚನಪತ್ರವನ್ನು ನೀಡಿದ್ದನೆಂದು ಪಿ.ಡಬ್ಲ್ಯು.ಹೇಳಿದ್ದಾರೆ.ಆದಾಗ್ಯೂ, ಸದರಿ ವಚನಬಂಧವನ್ನು ಸಹ ಹಾಜರುಪಡಿಸಿಲ್ಲ ಮತ್ತು ಗುರುತಿಸಿಲ್ಲ.ಆದ್ದರಿಂದ, ಮೊದಲಿನ ಸಂದರ್ಭದಲ್ಲಿ ಆರೋಪಿಯು ಸಂತ್ರಸ್ತ ಬಾಲಕಿಯನ್ನು ಅಪಹರಿಸಿದ್ದನೆಂಬುದನ್ನು ಸಹ ಪ್ರಾಸಿಕ್ಯೂಷನ್ ಸಾಬೀತುಪಡಿಸಿದೆ ಎಂದು ಹೇಳಲಾಗುವುದಿಲ್ಲ.

14. ಆರೋಪಿಯ ವಿರುದ್ಧ ಪಿ.ಡಬ್ಲ್ಯು.ದೂರನ್ನು ಸಲ್ಲಿಸಿದ ನಂತರ, ಪೊಲೀಸರು ಸಂತ್ರಸ್ತೆ ಹಾಗೂ ಆರೋಪಿಗಳಿಬ್ಬರೂ ಅಂಗಲ್ಲು ಗ್ರಾಮದಲ್ಲಿರುವುದನ್ನು 25 ದಿನಗಳ ನಂತರ ಪತ್ತೆ ಹಚ್ಚಿದರೆಂದು, ಅವರ ಮಗಳು ಆರೋಪಿಯು ಆಕೆಯನ್ನು ಬಲವಂತವಾಗಿ ಕರೆದುಕೊಂಡು ಹೋದನೆಂದು ಹೇಳಿದಳೆಂದು ಹೇಳಿಕೆ ನೀಡಿದ್ದಾರೆ.

15. ಪಿ.ಡಬ್ಲ್ಯು, 8 ಸಂತ್ರಸ್ತೆಯ ತಾಯಿಯಾಗಿದ್ದು, ದೂರನ್ನು ಸಲ್ಲಿಸಿದ ಸುಮಾರು ಒಂದು ವಾರದ ನಂತರ, ಸಂತ್ರಸ್ತೆಯನ್ನು ಪೊಲೀಸ್ ಠಾಣೆಗೆ ಕರೆತರಲಾಯಿತು ಎಂದು ಹೇಳಿದ್ದಾರೆ.ಆ ದಿನದಂದು, ಆರೋಪಿಯನ್ನು ಪೊಲೀಸ್ ಠಾಣೆಗೆ ಕರೆತಂದಿರಲಿಲ್ಲವೆಂದು ಹೇಳಿದ್ದಾಳೆ.ಸಂತ್ರಸ್ತೆಯು, ಆರೋಪಿಯು ತನ್ನನ್ನು ಕರೆದುಕೊಂಡು

ಹೋಗಿ ಅಂಗಲ್ಲು ಗ್ರಾಮದಲ್ಲಿ ಇರಿಸಿದ್ದಾಗಿ ಮತ್ತು ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾಗಿ ತಿಳಿಸಿದ್ದಾಳೆ ಎಂದು ಅವರು ಹೇಳಿದ್ದಾರೆ.

16. ಪ್ರಾಸಿಕ್ಯೂಷನ್ ಪ್ರಕಾರ, ದೂರನ್ನು ಸಲ್ಲಿಸಿದ ನಂತರ, ತನಿಖಾವಧಿಯಲ್ಲಿ ಪೊಲೀಸರು ಆರೋಪಿ ಮತ್ತು ಸಂತ್ರಸ್ತ ಬಾಲಕಿ ಈರ್ವರನ್ನೂ, ಆಂಧ್ರ ಪ್ರದೇಶದ ತ ಂ ಬಲಪಲ್ಲಿಯ ಅಂಗಲ್ಲು ಗ್ರಾಮದಲ್ಲಿದಿನಾಂಕ: 23.12.2016 ರಂದು ಪತ್ತೆ ಮಾಡಿದ್ದಾರೆ.ಪಿ.ಡಬ್ಲ್ಯು .16-ತನಿಖಾಧಿಕಾರಿಯು, ಆರೋಪಿ ಮತ್ತು ಸಂತ್ರಸ್ತೆಯನ್ನು ಪೊಲೀಸ್ ಸಬ್-ಇನ್ಸ್ಪೆಕ್ಟರ್ ತಮ್ಮ ಮುಂದೆ ಹಾಜರುಪಡಿಸಿದ್ದರು ಮತ್ತು ತರುವಾಯ ಅವರು ಆರೋಪಿಯನ್ನು ಬಂಧಿಸಿ, ನಿಶಾನೆ ಪಿ .21 ರ ಪ್ರಕಾರ ಆತನ ಸ್ವಯಂಪ್ರೇರಿತ ಹೇಳಿಕೆಯನ್ನು ದಾಖಲಿಸಲಾಯಿತು ಎಂದು ಹೇಳಿದ್ದಾರೆ.

17. ಪಿ.ಡಬ್ಲ್ಯು, 15 ಪೊಲೀಸ್ ಸಬ್-ಇನ್ಸ್ಪೆಕ್ಟರ್ ಆಗಿದ್ದಾರೆ.ಅವರು, ಪೊಲೀಸ್ ಕಾನ್ಸ್ಟೆಬಲ್ 585 ಮತ್ತು ಮಹಿಳಾ ಕಾನ್ಸ್ಟೆಬಲ್ 709 ಇವರು,ದಿನಾಂಕ: 23.12.2016 ರಂದು ಸಂತ್ರಸ್ತೆಯನ್ನು ಹಾಗೂ ಆರೋಪಿಯನ್ನು ತನ್ನ ಮುಂದೆ ಹಾಜರುಪಡಿಸಿದ್ದರೆಂದು ಹೇಳಿದ್ದು, ನಿಶಾನೆ ಪಿ -3 ರ ಪ್ರಕಾರ ಸಂತ್ರಸ್ತೆಯ ಹೇಳಿಕೆಯನ್ನು ಅವರು ದಾಖಲಿಸಿದ್ದಾರೆ.ಆರೋಪಿಯನ್ನು ಪತ್ತೆ ಮಾಡಿದ್ದಂಥ ಪೊಲಿಸ್ ಕಾನ್ಸ್ಟೇಬಲ್ರನ್ನು ಪ್ರಾಸಿಕ್ಯೂಷನ್ ವಿಚಾರಣೆ ಮಾಡಿರುವುದಿಲ್ಲ.ಸಂತ್ರಸ್ತೆ ಮತ್ತು ಆರೋಪಿಯನ್ನು ಆಂಧ್ರ ಪ್ರದೇಶದ ತಂಬಲಪಲ್ಲಿಯ ಅಂಗಲ್ಲು ಗ್ರಾಮದಲ್ಲಿ ಒಟ್ಟಿಗೆ ಪತ್ತೆ ಮಾಡಲಾಗಿತ್ತು ಎಂದು ತೋರಿಸುವ ಯಾವುದೇ ಸಾಕ್ಷ್ಯವಿರುವುದಿಲ್ಲ.

18. ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು, ತನಿಖಾವಧಿಯಲ್ಲಿ ದಾಖಲಿಸಿದ್ದ ಸಂತ್ರಸ್ತ ಬಾಲಕಿಯ ಹೇಳಿಕೆಯನ್ನು ಗುರುತಿಸಬಾರದಾಗಿತ್ತು ಮತ್ತು ಮುಖ್ಯ ಸಾಕ್ಷ್ಯವೆಂದು ಅದನ್ನು ಅವಲಂಬಿಸಬಾರದಾಗಿತ್ತು ಎಂದು ತೀವ್ರವಾಗಿ ವಾದಿಸಿದ್ದಾರೆ.ಪ್ರಸ್ತುತ ಮೊಕದ್ದಮೆಯಲ್ಲಿ, ಪಿ.ಡಬ್ಲ್ಯು.ದೂರನ್ನು ಸಲ್ಲಿಸಿದ್ದು, ಅದನ್ನು ನಿಶಾನೆ-ಪಿ .1 ಎಂದು ಗುರುತಿಸಲಾಗಿದೆ.ತನಿಖಾವಧಿಯಲ್ಲಿ ದಾಖಲಿಸಿದ್ದಂಥ ತರುವಾಯದ ಹೇಳಿಕೆಯನ್ನು ಗುರುತಿಸಲಾಗಿಲ್ಲ.ಆದ್ದರಿಂದ, ನಿಶಾನೆ-ಪಿ .3 ಮತ್ತು ಪಿ .5 ಎಂದು ಗುರುತಿಸಲಾಗಿರುವ ಸಂತ್ರಸ್ತ ಬಾಲಕಿಯ ಹೇಳಿಕೆಗಳು ಸಾಕ್ಷ್ಯದಲ್ಲಿ ಅಂಗೀಕಾರಾರ್ಹವಲ್ಲ.ಸದರಿ ಹೇಳಿಕೆಗಳನ್ನು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 161 ನೇ ಮತ್ತು 162 ನೇ ಪ್ರಕರಣಗಳ ಅಡಿಯಲ್ಲಿ ತನಿಖಾವಧಿಯಲ್ಲಿ ದಾಖಲಿಸಲಾಗಿತ್ತು.ಅಂಥ ಹೇಳಿಕೆಗಳನ್ನು ನೀಡುವ ವ್ಯಕ್ತಿಯು, ನ್ಯಾಯಾಲಯದ ಮುಂದೆ ನೀಡಲಾಗುವ ಸಾಕ್ಷ್ಯದಲ್ಲಿ ಅದನ್ನು ಪುಷ್ಟೀಕರಿಸದ ಹೊರತು, ಸದರಿ ಹೇಳಿಕೆಯಲ್ಲಿ ಮಾಡಿದ ವಾದಗಳನ್ನು ಸಾಕ್ಷ್ಯವಾಗಿ ತೆಗೆದುಕೊಳ್ಳಲಾಗುವುದಿಲ್ಲ.ಆದ್ದರಿಂದ, ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದದಲ್ಲಿ ಸಾಕಷ್ಟು ಸಮರ್ಥನೆ ಇದೆ.

19. ಮೇಲೆ ಗಮನಿಸಿದಂತೆ, ಪಿ.ಡಬ್ಲ್ಯು .2 ಆಗಿ ವಿಚಾರಣೆಗೊಳಗಾದ ಫಿರಾದುದಾರಳು, ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಂಪೂರ್ಣವಾಗಿ ಉಪೇಕ್ಷಿಸಿದ್ದಾಳೆ.ಆಕೆಯ ಹೇಳಿಕೆಯನ್ನು ಮ್ಯಾಜಿಸ್ಟ್ರೇಟರು ದಾಖಲಿಸಿದ್ದರೆಂದು ಆಕೆ ಹೇಳಿದ್ದಾಳೆ.ಅದನ್ನು ನಿಶಾನೆ-ಪಿ 4 ಎಂದು ಗುರುತಿಸಲಾಗಿದೆ.ಆಕೆಯ ಸಾಕ್ಷ್ಯದಲ್ಲಿ, ಮಾನ್ಯ ಮ್ಯಾಜಿಸ್ಟ್ರೇಟರು ಆಕೆಯ ಹೇಳಿಕೆಯನ್ನು ದಾಖಲಿಸಿದ್ದರೆಂದು ಆಕೆಯು ಹೇಳಿದ್ದಾಗ್ಯೂ, ನಿಶಾನೆ-ಪಿ 4 ರಲ್ಲಿರುವ ಒಳಾಂಶಗಳು ಆಕೆಯು ಹೇಳಿದ್ದಲ್ಲವೆಂದು ಆಕೆಯು ಹೇಳಿದ್ದಾಳೆ.ಹಾಗಿಲ್ಲದಿದ್ದರೂ ಸಹ, ನಿಶಾನೆ-ಪಿ 4 ನ್ನು ಅವಲೋಕಿಸಲಾಗಿ, ಅದು ಆರೋಪಿಯು ಅವಳನ್ನು ಪ್ರೇರೇಪಿಸಿರಲಿಲ್ಲ ಮತ್ತು ಅಪಹರಿಸಿರಲಿಲ್ಲ ಅಥವಾ ಆತನು ಆಕೆಯ ಮೇಲೆ 0 ಯಾವುದೇ ಲೈಂಗಿಕ ಸಂಭೋಗದ ಕೃತ್ಯವನ್ನು ಎಸಗಿದ್ದನೆಂಬುದನ್ನು ಸೂಚಿಸುವುದಿಲ್ಲ.ನಿಶಾನೆ-ಪಿ 4 ರಲ್ಲಿ, ಆರೋಪಿ ಮತ್ತು ಸಂತ್ರಸ್ತೆ ಪ್ರೀತಿಸುತ್ತಿದ್ದು, ಅವರು ಆಗಾಗ್ಗೆ ದೂರವಾಣಿ

ಮುಖಾಂತರ ಮಾತನಾಡುತ್ತಿದ್ದರು ಎಂದು ಹೇಳಲಾಗಿದೆ.ಅದರ ಬಗ್ಗೆ ತಿಳಿದು ಬಂದ ನಂತರ, ಆಕೆಯು ಕುಟುಂಬ ಸದಸ್ಯರು ಆಕೆಗೆ ಬಯ್ದಿದ್ದಾರೆ.ಅವರಿಗೆ ಅದು ಇಷ್ಟವಿರಲಿಲ್ಲ ಮತ್ತು ಆಕೆಯು ಆರೋಪಿಯನ್ನು ಪ್ರೀತಿಸುವುದನ್ನು ಮುಂದುವರಿಸಿದರೆ, ಆಕೆಯು ಮನೆಯಲ್ಲಿ ಇರುವಂತಿಲ್ಲ ಎಂದು ಆಕೆಗೆ ಹೇಳಿದ್ದಾರೆ.ಮಾರನೆಯ ದಿನದಂದು, ಆಕೆಯ ಪಾಲಕರಿಗೆ ತಿಳಿಸದೆ, ಮದನಪಲ್ಲಿಗೆ ಹೋಗಿ, ಆರೋಪಿಗೆ ದೂರವಾಣಿ ಕರೆ ಮಾಡಿದ್ದು, ಆತನು ಮದನಪಲ್ಲಿ ಬಸ್ ನಿಲ್ದಾಣಕ್ಕೆ ಬಂದು, ಆಕೆಯನ್ನು ಅಂಗಲ್ಲು ಗ್ರಾಮದಲ್ಲಿರುವ ತನ್ನ ಸ್ನೇಹಿತನ ಮನೆಗೆ ಕರೆದುಕೊಂಡು ಹೋಗಿದ್ದಾನೆ ಮತ್ತು ಸುಮಾರು ಒಂದು ತಿಂಗಳ ಕಾಲ ಅವರು ಒಟ್ಟಿಗೆ ಇದ್ದಾರೆ.ಆರೋಪಿಯು ಆಕೆಗೆ ಯಾವುದೇ ತೊಂದರೆ ನೀಡಿಲ್ಲ ಮತ್ತು ಯಾವುದೇ ಲೈಂಗಿಕ ಸಂಭೋಗ ಎಸಗಿಲ್ಲವೆಂದು ಹೇಳಲಾಗಿದೆ.ದಿನಾಂಕ: 22.12.2016 ರಂದು, ಶ್ರೀನಿವಾಸಪುರದ ಪೊಲೀಸರು ಅಂಗಲ್ಲು ಗ್ರಾಮಕ್ಕೆ ಬಂದು ಆಕೆಯನ್ನು ಹಾಗೂ ಆರೋಪಿಯನ್ನು ಶ್ರೀನಿವಾಸಪುರಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದು ಹೇಳಲಾಗಿದೆ.ಆಕೆಯು ತನ್ನ ಸ್ವಂತ ಇಚ್ಛೆಯಂತೆ ಮದನಪಲ್ಲಿಗೆ ಹೋಗಿದ್ದಾಳೆ ಮತ್ತು ಯಾರೊಬ್ಬರೂ ಆಕೆಯನ್ನು ಒತ್ತಾಯಿಸಿಲ್ಲವೆಂದು ಹೇಳಲಾಗಿದೆ.

20. ಉತ್ಪಲ್ ದಾಸ್ ಮತ್ತು ಇನ್ನೊಬ್ಬರು ವಿರುದ್ಧ ಪಶ್ಚಿಮ ಬಂಗಾಳ ರಾಜ್ಯ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, " ದಂಡ ಪ್ರಕ್ರಿಯಾ ಸಂಹಿತೆಯ 164 ನೇ ಪ್ರಕರಣದ ಮೇರೆಗೆ ದಾಖಲಿಸಿದ ಹೇಳಿಕೆಯನ್ನು ಎಂದಿಗೂ ಸಂಗತಿಗಳ ನಿಜವಾದ ಮುಖ್ಯ ಸಾಕ್ಷ್ಯವೆಂದು ಬಳಸಲಾಗುವುದಿಲ್ಲವಾದರೂ, ಅದನ್ನು ನೀಡಿದ ಸಾಕ್ಷಿದಾರನ ಪ್ರತಿ ಹೇಳಿಕೆಯನ್ನಾಗಿ ಮತ್ತು ಸಮರ್ಥನೆಯನ್ನಾಗಿ ಬಳಸಬಹುದು.ದಂಡ ಪ್ರಕ್ರಿಯಾ ಸಂಹಿತೆಯ 164 ನೇ ಪ್ರಕರಣದ ಅಡಿಯಲ್ಲಿ ನೀಡಿದ ಹೇಳಿಕೆಯನ್ನು ನೀಡಿದ ವ್ಯಕ್ತಿಯನ್ನು ಪಾಟಿ-ಸವಾಲಿಗೆ ಒಳಪಡಿಸಲು ಆ ಹೇಳಿಕೆಯನ್ನು ಬಳಸಬಹುದಾಗಿದ್ದು, ಫಲಿತಾಂಶವು ಸಂತ್ರಸ್ತೆಯ ಸಾಕ್ಷ್ಯವು ಸುಳ್ಳು ಎಂದು ತೋರಿಸಬಹುದು.ಪ್ರಾಸಿಕ್ಯೂಷನ್ನರ ಸಾಕ್ಷಿದಾರರ ವಿಶ್ವಾಸಾರ್ಹತೆಯನ್ನು ಖಂಡಿಸಲು ಅದನ್ನು ಬಳಸಬಹುದಾಗಿದೆ " ಎಂದು ಅಭಿಪ್ರಾಯಪಡಲಾಗಿದೆ.

21. ಪ್ರಸ್ತುತ ಮೊಕದ್ದಮೆಯಲ್ಲಿ, ಸಂತ್ರಸ್ತೆಯು ನಿಶಾನೆ-ಪಿ 4 ಪ್ರಕಾರವಾಗಲಿ ಅಥವಾ ನಿಶಾನೆ-ಪಿ .3 ಮತ್ತು 5 ರ ಪ್ರಕಾರವಾಗಲಿ ಹೇಳಿದ್ದಾಳೆ ಎಂಬುದನ್ನು ಪಿ.ಡಬ್ಲ್ಯು .2 ರಿಂದ ವ್ಯಕ್ತಪಡಿಸುವಲ್ಲಿ ಪ್ರಾಸಿಕ್ಯೂಷನ್ ಸಂಪೂರ್ಣವಾಗಿ ವಿಫಲರಾಗಿದ್ದಾರೆ.ಸಂತ್ರಸ್ತೆ ಮತ್ತು ಆರೋಪಿ, ಅಂಗಲ್ಲು ಗ್ರಾಮದಲ್ಲಿ ಸಿ.ಡಬ್ಲ್ಯೂ .11-ನಾಗರಾಜ ಎಂಬಾತನ ಮನೆಯಲ್ಲಿ ಉಳಿದುಕೊಂಡಿದ್ದರೆಂದು ಹೇಳಲಾಗಿದೆಯೋ ಆತನನ್ನು ಪ್ರಾಸಿಕ್ಯೂಷನ್ ವಿಚಾರಣೆಗೊಳಪಡಿಸಿರುವುದಿಲ್ಲ ಎಂಬುದನ್ನು ಸಹ ಗಮನಿಸಬೇಕಿದೆ.ಪ್ರಾಸಿಕ್ಯೂಷನ್ ಪ್ರಕಾರ, ಪಿ.ಡಬ್ಲ್ಯು.ಮತ್ತು ಪಿ.ಡಬ್ಲ್ಯು.ಇವರು, ನಾಗರಾಜ್ನ ಮನೆಯಲ್ಲಿ ಸಿದ್ಧಪಡಿಸಲಾದ ಮಹಜರ್ ನಿಶಾನೆ-ಪಿ 7 ಕ್ಕೆ ಸಹಿ ಮಾಡಿರುವ ಪಂಚ ಸಾಕ್ಷಿದಾರರಾಗಿದ್ದಾರೆ.ಈ ಇಬ್ಬರೂ ಸಾಕ್ಷಿದಾರರು ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಮರ್ಥಿಸಿರುವುದಿಲ್ಲ.ಆದ್ದರಿಂದ, ಆರೋಪಿಯು ಸಂತ್ರಸ್ತ ಬಾಲಕಿಯನ್ನು ಅಪಹರಿಸಿ, ಆಂಧ್ರ ಪ್ರದೇಶದ ತಂಬಲಪಲ್ಲಿಯ ಅಂಗಲ್ಲು ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದನೆಂಬುದನ್ನಾಗಲಿ ಅಥವಾ ಆಕೆಯನ್ನು ಸದರಿ ಮನೆಯಲ್ಲಿರಿಸಿ, ಆಕೆಯ ಮೇಲೆ ತೀವ್ರತರ ಮರ್ಮಾಂಗಭೇದಕ ಲೈಂಗಿಕ ಅತ್ಯಾಚಾರ ಎಸಗಿದ್ದನೆಂಬುದನ್ನಾಗಲಿ ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ.

22. ಸಂತ್ರಸ್ತೆಯನ್ನು ವೈದ್ಯಕೀಯ ಪರೀಕ್ಷೆಗೆ ಕರೆದುಕೊಂಡು ಹೋಗಲಾಗಿದ್ದ ಪಿ.ಡ ಬ್ಲ್ಯು.14-ಮಹಿಳಾ ವೈದ್ಯಾಧಿ ಕಾರಿಯನ್ನು ಪ್ರಾಸಿಕ್ಯೂಷನ್ ವಿಚಾರಣೆಗೊಳಪಡಿಸಿದೆ.ಪಿ.ಡಬ್ಲ್ಯು .14 ಅವರು, ಸಂತ್ರಸ್ತ ಬಾಲಕಿಯು

ಯಾವುದೇ ವೈದ್ಯಕೀಯ ಪರೀಕ್ಷೆಗೆ ಒಳಗಾಗಲು ನಿರಾಕರಿಸಿದಳೆಂದು ಮತ್ತು ಈ ಸಂಬಂಧದಲ್ಲಿ ಅವರು ನಿಶಾನೆ-ಪಿ .19 ನ್ನು ನೀಡಿರುವುದಾಗಿಯೂ ಹೇಳಿದ್ದಾರೆ.ಆದ್ದರಿಂದ, ನಿರುಪಾಧಿಕವಾಗಿ ಸಂತ್ರಸ್ತ ಬಾಲಕಿಯ ಮೇಲೆ ಯಾವುದೇ ಲೈಂಗಿಕ ಸಂಭೋಗ ಎಸಗಲಾಗಿತ್ತು ಎಂದು ಖಚಿತಪಡಿಸುವ ಯಾವುದೇ ವೈದ್ಯಕೀಯ ಪರೀಕ್ಷಾ ವರದಿ ಇಲ್ಲ.

23. ಅಧಿವಿಚಾರಣಾ ನ್ಯಾಯಾಲಯವು ಪಿ.ಡಬ್ಲ್ಯು .14 ಇವರ ಸಾಕ್ಷ್ಯವನ್ನು ಮತ್ತು ನಿಶಾನೆ-ಪಿ 19 ರಲ್ಲಿನ ದಸ್ತಾವೇಜುಗಳನ್ನು ಅವಲಂಬಿಸಿದ್ದು, ಅದರಲ್ಲಿ ಪ್ರೇಮ್ ಕುಮಾರ್ (ಆರೋಪಿ) ಹೆಸರಿನ ವ್ಯಕ್ತಿಯು ಲೈಂಗಿಕ ದೌರ್ಜನ್ಯ ಎಸಗಿದ್ದಾನೆಂಬ ವೈದ್ಯಕೀಯ ವೃತ್ತಾಂತವನ್ನು ನೀಡಿರುವುದನ್ನು ತೋರಿಸಲಾಗಿದೆ.ನಿಶಾನೆ-ಪಿ .19 ನ್ನು ಅಥವಾ ಪಿ.ಡಬ್ಲ್ಯು .14 ರ ಸಾಕ್ಷ್ಯವನ್ನು ಅವಲೋಕಿಸಲಾಗಿ, ಸಂತ್ರಸ್ತೆಯು ಸದರಿ ವೃತ್ತಾಂತವನ್ನು ನೀಡಿದ್ದಳೆಂದು ತೋರಿಸುವ ಯಾವ ಅಂಶವು ಇರುವುದಿಲ್ಲ.ಸಂತ್ರಸ್ತೆಯು ಎಂದರೆ ಪಿ.ಡಬ್ಲ್ಯು.ತನ್ನ ವೃತ್ತಾಂತವನ್ನು ನೀಡಿದ್ದಾಳೆಂದು ಪಿ.ಡಬ್ಲ್ಯು .14 ಹೇಳಿರುವುದಿಲ್ಲ.ಪೊಲೀಸರು ಸಂತ್ರಸ್ತೆಯನ್ನು ಪಿ.ಡಬ್ಲ್ಯು .14 ಇವರ ಮುಂದೆ ಪ್ರೇಮ್ ಕುಮಾರ್ ಹೆಸರಿನ ವ್ಯಕ್ತಿಯು ಲೈಂಗಿಕ ದೌರ್ಜನ್ಯ ಎಸಗಿದ ವೃತ್ತಾಂತದೊಂದಿಗೆ ಕರೆದುಕೊಂಡು ಬಂದಿದ್ದರು ಎಂಬುದು ಕಂಡುಬರುತ್ತದೆ.ಆದುದರಿಂದ, ಸದರಿ ವೃತ್ತಾಂತವನ್ನು ಸಂತ್ರಸ್ತ ಬಾಲಕಿಯು ಪಿ.ಡಬ್ಲ್ಯು .14 ಇವರಿಗೆ ಒದಗಿಸಿರುವುದಿಲ್ಲ.

24. ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ನ್ಯಾಯವಾದಿಗಳು, ಸಂತ್ರಸ್ತ ಚ ಬಾಲಕಿಯ ತಂದೆ ಪಿ.ಡಬ್ಲ್ಯು.ಇವರು, ತನ್ನ ಮಗಳನ್ನು ಆರೋಪಿಯು ಅಪಹರಿಸಿರುವನೆಂದು ಹೇಳಿ,ದಿನಾಂಕ: 02.12.2016 ರಂದು ದೂರನ್ನು ಸಲ್ಲಿಸಿದ್ದಾರೆ; ದಿನಾಂಕ: 23.12.2016 ರಂದು ಸಂತ್ರಸ್ತ ಬಾಲಕಿಯನ್ನು ಪತ್ತೆ ಮಾಡಲಾಗಿತ್ತು, ಸಂತ್ರಸ್ತೆಯು ಅಪ್ರಾಪ್ತಳಾಗಿದ್ದರಿಂದ, ಪಿ.ಡಬ್ಲ್ಯು .1 ಮತ್ತು ಪಿ.ಡಬ್ಲ್ಯು .8 ಇವರ ಕಾನೂನುಬದ್ಧ ಪಾಲಕತ್ವದಿಂದ ಆಕೆಯನ್ನು ಕರೆದುಕೊಂಡು ಹೋಗಿ, ಆರೋಪಿಯು ಭಾರತ ದಂಡ ಸಂಹಿತೆಯ 363 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಎಸಗಿದ್ದಾನೆ ಎಂದು ವಾದಿಸಿದ್ದಾರೆ.

25. ಈಗಾಗಲೇ ಅಭಿಪ್ರಾಯಪಟ್ಟಂತೆ, ಸಂತ್ರಸ್ತ ಬಾಲಕಿಯನ್ನು ಕಾನೂನುಬದ್ಧ ಪಾಲಕತ್ವದಿಂದ ಆರೋಪಿಯು ಅಪಹರಿಸಿ, ತರುವಾಯ ಆಕೆಯನ್ನು ಕರೆದುಕೊಂಡು ಹೋಗಿ ಅಂಗಲ್ಲು ಗ್ರಾಮದಲ್ಲಿನ ಮನೆಯಲ್ಲಿ ಇರಿಸಿದ್ದನು ಎಂಬುದನ್ನು ಪ್ರಾಸಿಕ್ಯೂಷನ್ ಸಾಬೀತುಪಡಿಸಿರುವುದಿಲ್ಲ.ಹಾಗಿಲ್ಲದಿದ್ದರೂ, ಭಾರತ ದಂಡ ಸಂಹಿತೆಯ 363 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಆರೋಪಿಯನ್ನು ಶಿಕ್ಷಿಸಲು, ಪ್ರಾಸಿಕ್ಯೂಷನ್ ಭಾರತ ದಂಡ ಸಂಹಿತೆಯ 361 ನೇ ಪ್ರಕರಣದ ಘಟಕಾಂಶಗಳನ್ನು ಸಾಬೀತುಪಡಿಸಬೇಕಿತ್ತು.

26. ಎಸ್. ವರದರಾಜನ್ -ವಿರುದ್ಧ-ಮದ್ರಾಸ್ ರಾಜ್ಯ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"9. " ಕರೆದುಕೊ ಂ ಡು ಹೋಗುವುದು " ಮತ್ತು ಒಬ್ಬ ವ್ಯಕ್ತಿ ಜೊತೆಗೆ ಹೋಗಲು ಅಪ್ರಾಪ್ತಳಿಗೆ ಅನುಮತಿಸುವುದರ ನಡುವೆ ವ್ಯತ್ಯಾಸವಿದೆ.ಯಾವುದೇ ಕಲ್ಪಿಸಬಹುದಾದ ಸಂದರ್ಭಗಳಲ್ಲಿ, ಎರಡನ್ನು ಭಾರತ ದಂಡ ಸಂಹಿತೆಯ 361 ನೇ ಪ್ರಕರಣದ ಉದ್ದೇಶಗಳಿಗಾಗಿ ಒಂದೇ ವಿಷಯವನ್ನು ಅರ್ಥೈಸುತ್ತವೆಂದು ಪರಿಗಣಿಸಲಾಗುವುದಿಲ್ಲ ಎಂದು ವಿಧಿಸುವುದರಿಂದ ನಮ್ಮನ್ನು ನಾವು ರಕ್ಷಿಸಲು ಬಯಸುತ್ತೇವೆ ಎಂದಿದ್ದಾಗ್ಯೂ, ಎರಡು ಅಭಿವ್ಯಕ್ತಿಗಳು ಒಂದೇ ಆಗಿರುವುದಿಲ್ಲ.ಪ್ರಸ್ತುತ ಮೊಕದ್ದಮೆಗೆ ನಾವು ನಮ್ಮನ್ನು

ಸೀಮಿತಗೊಳಿಸುತ್ತೇವೆ.ಇಲ್ಲಿ, ಆರೋಪಿಯು ಕರೆದುಕೊಂಡು ಹೋಗಿದ್ದನು ಎಂದು ಆರೋಪಿಸಲಾಗಿರುವ ಅಪ್ರಾಪ್ತಳು, ಗೊತ್ತಿದ್ದೂ ಮತ್ತು ತಾನು ಏನು ಮಾಡುತ್ತಿದ್ದೇನೆ ಎಂಬುದರ ಸಂಪೂರ್ಣ ಅರ್ಥ ಗೊತ್ತಿರುವ ಸಾಮರ್ಥ್ಯ ಹೊಂದಿ, ತನ್ನ ತಂದೆಯ ರಕ್ಷಣೆಯನ್ನು ತೊರೆದು ಆರೋಪಿಯೊಂದಿಗೆ ಸ್ವ ಇಚ್ಛೆಯಿಂದ ಜೊತೆಗೂಡಿದ್ದಾಳೆ.ಅಂಥ ಸಂದರ್ಭದಲ್ಲಿ, ಆರೋಪಿಯು ಆಕೆಯ ಕಾನೂನುಬದ್ದ ಪಾಲಕರ ರಕ್ಷಣೆಯಿಂದ ಆಕೆಯನ್ನು ಕರೆದುಕೊಂಡು ಹೋಗಿದ್ದಾನೆ ಂ ದು ಹೇಳಬಹುದಾಗಿದೆ ಎಂದು ಎ ಂ ದು ನಾವು ಯೋಚಿಸಲಾಗುವುದಿಲ್ಲ.

ಈ ರೀತಿಯ ಸಂದರ್ಭದಲ್ಲಿ ಏನೋ ಒಂದು ಹೆಚ್ಚಿನ ಕಾರಣವನ್ನು ತೋರಿಸಬೇಕಾಗುತ್ತದೆ ಮತ್ತು ಅದು ಆರೋಪಿಯು ಮಾಡಿದ ಪ್ರಚೋದನೆಯ ಅಥವಾ ಪಾಲಕರ ಮನೆಯನ್ನು ಬಿಡಲು ಅಪ್ರಾಪ್ತಯ ಉದ್ದೇಶ ರೂಪುಗೊಳ್ಳುವಲ್ಲಿ ಆತನು ಸಕ್ರಿಯವಾಗಿ ಪಾಲ್ಗೊಂಡಿರುವ ರೀತಿಯದ್ದಾಗಿರುತ್ತದೆ. "1

27. ದಾಖಲೆಯಲ್ಲಿರುವ ಎಲ್ಲ ಸಾಕ್ಷ್ಯ ಎ ಮತ್ತು ಆಧಾರಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದ ನಂತರ, ಸಂಶಯಾತೀತವಾಗಿ ಆರೋಪಿಯ ವಿರುದ್ದ ಹೊರಿಸಿದ ಆರೋಪಗಳನ್ನು ಸಾಬೀತುಪಡಿಸಲು ಪ್ರಾಸಿಕ್ಯೂಷನ್ ವಿಫಲರಾಗಿದೆ ಎಂದು ನನಗೆ ಕಂಡುಬಂದಿದೆ.ಆರೋಪಿಯ ಅಪರಾಧವನ್ನು ನಿರ್ಣಯಿಸಲು ಮತ್ತು ಆತನಿಗೆ ಶಿಕ್ಷೆ ವಿಧಿಸಲು ಅಧಿವಿಚಾರಣಾ ನ್ಯಾಯಾಲಯವು ನೀಡಿದ ಕಾರಣಗಳು, ಕಾನೂನಿನ ನ್ಯಾಯಸಮ್ಮತ ತತ್ವಗಳನ್ನಾಧರಿಸಿರುವುದಿಲ್ಲ.ಆದುದರಿಂದ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಅಪರಾಧ ನಿರ್ಣಯ ಮತ್ತು ಶಿಕ್ಷೆಯ ಆದೇಶವು ಸಮರ್ಥನೀಯವಾಗಿರುವುದಿಲ್ಲ ಮತ್ತು ತಳ್ಳಿಹಾಕುವುದಕ್ಕೆ ತಕ್ಕುದಾಗಿವೆ.ಮೇಲೆ ಹೇಳಿದ ಕಾರಣಗಳಿಗಾಗಿ ಈ ಮುಂದಿನಂತೆ ಆದೇಶ ಹೊರಡಿಸಲಾಗಿದೆ:

ಆದೇಶ

ಅಪೀಲನ್ನು ಪುರಸ್ಕರಿಸಲಾಗಿದೆ.II ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಕೋಲಾರ [ಪೋಕೋ ವಿಶೇಷ ನ್ಯಾಯಾಲಯ] ನ್ಯಾಯಾಲಯದ ಕಡತಸಂಖ್ಯೆ: ಎಸ್ಸಿ 31/2017 ರಲ್ಲಿ ಹೊರಡಿಸಿದದಿನಾಂಕ: 10.12.2018 ರ ಅಪರಾಧ ನಿರ್ಣಯ ಮತ್ತು ಶಿಕ್ಷೆಯ ಆದೇಶವನ್ನು ಈ ಮೂಲಕ ತಳ್ಳಿಹಾಕಲಾಗಿದೆ.ಭಾರತ ದಂಡ ಸಂಹಿತೆಯ 363 ನೇ ಮತ್ತು 376 ( 2) ( i) ನೇ ಪ್ರಕರಣಗಳ ಮತ್ತು ಪೋಕ್ಸೊ ಅಧಿನಿಯಮದ 6 ನೇ ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧಗಳಿಂದ ಆರೋಪಿಯನ್ನು ಖುಲಾಸೆಗೊಳಿಸಲಾಗಿದೆ.ಆರೋಪಿಯು ಯಾವುದೇ ಜುಲ್ಮಾನೆ ಮೊತ್ತವನ್ನು ಠೇವಣಿ ಮಾಡಿದ್ದರೆ, ಅದನ್ನು ಹಿಂದಿರುಗಿಸತಕ್ಕದ್ದು.ಆತನ ಜಾಮೀನು ಬಂಧಪತ್ರವನ್ನು ರದ್ದುಗೊಳಿಸಲಾಗಿದೆ.